# ಕಾಗೆಗಳ ಗಣತಿ

■ ಶಶಿರೇಖಾ ನಾಗೇಂದ್ರ,
ತುಮಕೂರು

ವಿಜಯನಗರ ಸಾಮ್ರಾಜ್ಯದಲ್ಲಿ ತಾತಾಚಾರ್ಯ ಎಂಬ ವಿದ್ವಾಂಸರು ಹಾಗೂ ಅವರ ಸೋದರಳಿಯ ಪಾಂಡು ಅರಮನೆಯಲ್ಲಿ ಕೆಲಸದಲ್ಲಿದ್ದರು. ಪಾಂಡು ಶುದ್ಧ ಸೋಮಾರಿ ಯಾವ ಕೆಲಸವನ್ನೂ ಶ್ರದ್ಧೆಯಿಂದ ಮಾಡುತ್ತಿರಲಿಲ್ಲ ತಾತಾಚಾರ್ಯರ ಪ್ರಭಾವದಿಂದ ಇದೆಲ್ಲಾ ಮುಚ್ಚಿ ಹೋಗುತ್ತಿತ್ತು. ಪಾಂಡುವಿಗೆ ಜನ ಗಣತಿ ಮಾಡುವ ಕೆಲಸ. ಆತ ಊರೂರು ಸುತ್ತಿ ಜನಗಣತಿ ಮಾಡಬೇಕಿತ್ತು. ಪಾಂಡು ತನ್ನ ಮನೆಯ ಕೆಲಸಗಾರರನ್ನು ಕೆಲವು ಗ್ರಾಮಗಳಲ್ಲಿ ತಿರುಗಾಡಿಸಿ ಲೆಕ್ಕ ಬರೆಸಿ ಅದನ್ನೆ ಜನಗಣತಿಯ ಲೆಕ್ಕವೆಂದು ಅಧಿಕಾರಿಗಳಿಗೆ ಕೊಟ್ಟು ಹೇರಳವಾಗಿ ಸಂಬಳ ಪಡೆಯುತ್ತಿದ್ದ. ಹೇಗೋ ಈ ವಿಷಯ ರಾಮಕೃಷ್ಣನಿಗೆ ತಿಳಿಯಿತು. ಒಂದು ಸಾರಿ ಪಾಂಡು ಕೊಟ್ಟ ಜನಗಣತಿ ಲೆಕ್ಕವನ್ನು ರಾಮಕೃಷ್ಣ ಪರಿಶೀಲಿಸಿದಾಗ ಹೋದವರ್ಷದ ಲೆಕ್ಕಕ್ಕೂ ಈ ವರ್ಷದ ಲೆಕ್ಕಕ್ಕೂ ಅಜಗಜಾಂತರ ವ್ಯತ್ಯಾಸವಿತ್ತು. ಈ ವರ್ಷದ ಲೆಕ್ಕದಲ್ಲಿ ಸಾವಿರದಷ್ಟು ಜನ ಕಮ್ಮಿಯಾಗಿದ್ದರು.

ಒಂದೇ ವರ್ಷದಲ್ಲಿ ಇಷ್ಟೊಂದು ಜನ ಕಮ್ಮಿಯಾಗಲು ಹೇಗೆ ಸಾಧ್ಯ? ಈ ವಿಷಯವನ್ನು ದರ್ಬಾರಿನಲ್ಲಿ ಮಂಡಿಸಿದಾಗ ತಾತಾಚಾರ್ಯರು, ಪ್ರಭು... ಈ ವರ್ಷದಲ್ಲಿ ಯುದ್ಧವಾಯಿತಲ್ಲ. ಆ ಯುದ್ಧದಲ್ಲಿ ಸೈನಿಕರು ಸುಮಾರು ಜನ ಸತ್ತರು. ಮತ್ತೆ ಕೆಲವರಿಗೆ ಕೊರೊನಾ ಕಾಯಿಲೆ ಬಂದು ಸತ್ತುಹೋದರು. ಇನ್ನೂ ಕೆಲವರು ಊರು ಬಿಟ್ಟು ಹೋದರು ಎಂದು ತೇಲಿಸಿದರು. ಮಹಾರಾಜರು ಇದರ ಬಗ್ಗೆ ಅಷ್ಟಾಗಿ ತಲೆ ಕೆಡಿಸಿಕೊಳ್ಳಲಿಲ್ಲ. ರಾಮಕೃಷ್ಣನಿಗೆ ಇದರಿಂದ ಅವಮಾನಯಿತು. ಹೇಗಾದರೂ ಮಾಡಿ ತಾತಾಚಾರ್ಯರ ಹಾಗೂ ಪಾಂಡುವಿನ ಜನಗಣತಿಯ ವಿವರಗಳನ್ನು ಹೊರಗೆಳೆದು ಬುದ್ಧಿ ಕಲಿಸಬೇಕೆಂದು ನಿರ್ಧರಿಸಿದ.

ಸಮಯ ನೋಡಿಕೊಂಡು ರಾಜನಿಗೆ ಮಹಾಪ್ರಭು... ನನ್ನದೊಂದು ಮನವಿ ರಾಜ್ಯದ ಜನಗಣನೆ ಮಾತ್ರ ಮಾಡಿದರೆ ಸಾಲದು. ಸಾಕು ಪ್ರಾಣಿಗಳ ಲೆಕ್ಕವನ್ನೂ ಇಡಬೇಕು. ಪಶು ಸಂಪತ್ತೆಂದರೆ ಅದೇ ತಾನೆ? ಎಂದನು.

ಹೌದು, ನಿಜ ಹಾಲು ಕರೆಯುವ ಹಸು– ಎಮ್ಮೆ ಸೇರಿ ದನಗಳ ಲೆಕ್ಕವನ್ನು ಇಡಬೇಕು ದೇಶದ ಉನ್ನತಿ ಅವನತಿಗಳನ್ನು ಅಳೆದು ತಿಳಿಯಲು ಈ ಸಂಪದದ ಲೆಕ್ಕವೂ ಬೇಕು ಎಂದು ಮಹಾರಾಜರು ಹೇಳಿದರು.

ತಾವು ಸರಿಯಾಗಿ ಹೇಳಿದಿರಿ ಪ್ರಭು, ಅಷ್ಟು ಮಾತ್ರವಲ್ಲ. ಪಕ್ಷಿಗಳ ಲೆಕ್ಕಕೂಡಾ ಇಡಬೇಕು. ಗಿಳಿ, ಹದ್ದು, ಪಾರಿವಾಳ, ಕಾಗೆಗಳೆಷ್ಟಿವೆ ಎಂಬುದು ತಿಳಿಯಬೇಕು. ಕಾಗೆಗಳೂ ನಮ್ಮ ಪಿತೃಗಳ ಪ್ರತಿನಿಧಿಯಲ್ಲವೇ? ಎಂದನು ರಾಮಕೃಷ್ಣ.

ಪ್ರಭುಗಳು ನಿಜ, ಆದರೆ ಮೇಲೆ ಹಾರಾಡುವ ಪಕ್ಷಿಗಳ ಲೆಕ್ಕವಿಡುವುದು ಹೇಗೆ?

ಅದ್ಯಾವಾ ಮಹಾ ಕಷ್ಟ, ನೀವು ಪಾಂಡುವಿಗೆ ಕೂಡುವ ಕಾಲೂ ಭಾಗದ ಪಗಾರವನ್ನು ನನಗೆ ಕೊಟ್ಟರೆ ಸಾಕು. ಕಾಗೆಗಳ ಲೆಕ್ಕವನ್ನು ನಾನು ಸರಿಯಾಗಿಡುತ್ತೇನೆ ಎಂದ ರಾಮಕೃಷ್ಣ.

ರಾಜನಿಗೆ ರಾಮಕೃಷ್ಣನ ಮಾತಿನಲ್ಲಿ ನಂಬಿಕೆ ಬರಲಿಲ್ಲ. ನೋಡೋಣ ಎನ್ನುತ್ತಾ ಒಪ್ಪಿಗೆ ನೀಡಿ ಮುಂಗಡ ಹಣವನ್ನು ಕೊಟ್ಟ.

ರಾಮಕೃಷ್ಣನು ಆ ಹಣದಿಂದ ಹೆಂಡತಿ ಮಕ್ಕಳೊಂದಿಗೆ ತೀರ್ಥಯಾತ್ರೆ ಮಾಡಿಬಂದನು. ದಿನಗಳು ಕಳೆದವು ಒಂದು ದಿನ ರಾಜನು ರಾಮಕೃಷ್ಣನನ್ನು ಕಾಗೆಗಳ ಲೆಕ್ಕ ಏನಾಯಿತು? ಎಂದು ಕೇಳಿದರು.

ಲೆಕ್ಕ ತಯಾರಾಗಿದೆ. ನಮ್ಮ ರಾಜ್ಯದಲ್ಲಿ ಒಟ್ಟು ಸಾವಿರದ ಇಪ್ಪತ್ತೆರಡುವರೆ ಕಾಗೆಗಳಿವೆ ಎಂದನು.

ಇಪ್ಪತ್ತೇರಡುವರೆ ಏನದು? ಎಂದು



ಮಂಜುನಾಥ್ ಹುಲಕೋಟ್ಟೆ